ಆ) ಆವರಲ್ಲಿ ಎಷ್ಟು ಜನ ಹೆಚ್ಚಿನ ಅಭ್ಯಾಸಕ್ಕಾಗಿ ಹೋಗಿದ್ದಾರೆ?

ಇ) ಭಟ್ಕಳ ತಾಲೂಕಿನ ಕ್ಷೇತ್ರದಲ್ಲಿಯೇ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳು ಎಷ್ಟು ? ಹಾಗೂ ಎಲ್ಲೆಲ್ಲಿ?

ಈ) ಸದರಿ ಜಿಲ್ಲೆಯಲ್ಲಿ ಆರೋಗ್ಯ ಖಾತೆಯ ಉಪಯೋಗಕ್ಕೆ ಮಂಜೂರಾದ ವಾಹನಗಳ ಸಂಖ್ಯೆ ಎಷ್ಟು ? ಹಾಗೂ ಆ ಪೈಕಿ ಸುಸ್ಥಿತಿಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು.

ಉ) ವಾಹನಗಳು ಇಲ್ಲದ ಸ್ಥಳಗಳು ಯಾವುವು ಅಂಥ ಸ್ಥಳಗಳಿಗೆ ಯಾವಾಗ ವಾಹನಗಳನ್ನು ಪೂರೈಸಲಾಗುವುದು ?

ಶ್ರೀ ಹೆಜ್.ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಆರೋಗ್ಯ ಅಧಿಕಾರಿ ಹಾಗೂ ಶಸ್ತ್ರ ಚಿಕಿತ್ಸಕರು, ೨೪ ಕಡೆಗಳಲ್ಲಿ ಒಟ್ಟು ೨೯ ಹುದ್ದೆಗಳು ಖಾಲಿ ಇವೆ.

ಆರೋಗ್ಯಾಧಿಕಾರಿ ದರ್ಜೆ (ಎ) ಕಿರಿಯ. ೪ ಕಡೆ ೪ ಹುದ್ದೆ. ಸಹಾಯಕ ದಂತ ವೈದ್ಯರು ೪ ಕಡೆ ೪ ಹುದ್ದೆ.

ಆ) ೪ ಮಂದಿ ಮಹಿಳಾ ವೈದ್ಯರುಗಳು.

ಇ) ಆರೋಗ್ಯಾಧಿಕಾರಿ ದರ್ಜೆ ಎ) ಕಿರಿಯ ಸಾರ್ವಜನಿಕ ಆಸ್ಪತ್ರೆ ಭಟ್ಕಳ್ ೧

ಸಹಾಯಕ ದಂತ ವೈದ್ಯ, ಸಾರ್ವಜನಿಕ ಆಸ್ಪತ್ರೆ, ಭಟ್ಕಳ್ ೧

ಆರೋಗ್ಯಾಧಿಕಾರಿ ಹಾಗೂ ಸಹಾಯಕ ಶಸ್ತ್ರ ಚಿಕಿತ್ಸಕರು – ೩

೧ ಪ್ರಾಥಮಿಕ ಆರೋಗ್ಯ ಕೇಂದ್ರ, ಮಂಕಿ ೧

೨ ಸಾರ್ವಜನಿಕ ಆಸ್ಪತ್ರೆ, ಭಟ್ಕಳ್ (ಮಹಿಳಾ ವೈದ್ಯರು) ೧

೩ ಪ್ರಾಥಮಿಕ ಆರೋಗ್ಯ ಘಟಕ, ಬೈಲೂರು ೧

ಈ) ಜಿಲ್ಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ೬೧ ವಾಹನಗಳಿವೆ ಸುಸ್ಥಿತಿಯಲ್ಲಿರುವ ವಾಹನಗಳ ಸಂಖ್ಯೆ ೨೫.

ಈ ಕೆಳಕಂಡ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಿಶೇಷವಾಗಿ ನೀಡ್ಸ್ ಪೋಷಾಯಣ ಆಶ್ರಯದಲ್ಲಿ ವಾಹನಗಳು ಮಂಜೂರಾಗಿದ್ದು, ಆನುದಾನದ ಅಭಾವದಿಂದಾಗಿ ವಾಹನಗಳನ್ನು ಖರೀದಿ ಮಾಡಲು ಸಾಧ್ಯವಾಗಿಲ್ಲ. ಅನುದಾನವು ದೊರಕಿದಂತೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಾಹನಗಳನ್ನು ಖರೀದಿಸಿ ಒದಗಿಸಲಾಗುವುದು.

೧ ಪ್ರಾಥಮಿಕ ಆರೋಗ್ಯ ಕೇಂದ್ರ ಮಳಗಿ.

೨ ಪ್ರಾಥಮಿಕ ಆರೋಗ್ಯ ಕೇಂದ್ರ, ಸಾಂಬ್ರಾಣಿ.

೩ ಪ್ರಾಥಮಿಕ ಆರೋಗ್ಯ ಕೇಂದ್ರ, ಮಂಗರಡೇಶ್ವರ.

೪ ಪ್ರಾಥಮಿಕ ಆರೋಗ್ಯ ಕೇಂದ್ರ, ಬನವಾಸಿ.

೫ ಪ್ರಾಥಮಿಕ ಆರೋಗ್ಯ ಕೇಂದ್ರ, ಗೋಕರ್ಣ

ರಾಜ್ಯದಲ್ಲಿ ಅಲೋಪತಿ ಆರೋಗ್ಯ ಘಟಕಗಳ ಜೊತೆಯಲ್ಲಿ ಆಯುರ್ವೇದ ಕೇಂದ್ರವನ್ನು ತೆರೆಯುವುದು.

೧೪೭೫. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರತಿಯೊಂದು ಅಲೋಪತಿ ಆರೋಗ್ಯ ಘಟಕಗಳ ಜೊತೆಯಲ್ಲಿ ಆಯುರ್ವೇದ ಕೇಂದ್ರಗಳನ್ನು ತೆರೆಯುವ ಯೋಜನೆ ಸರ್ಕಾರಕ್ಕೆ ಇದೆಯೆ ?

ಆ) ಈ ವಿಚಾರವು ಡಾ॥ ಮೇಲುಕೋಟೆಯವರ ಶಿಫಾರಸ್ಸಿನಲ್ಲಿ ಒಂದಾಗಿಲ್ಲವೆ?

ಇ) ಈ ಪದ್ಧತಿಯು ನೆರೆಹೊರೆ ರಾಜ್ಯಗಳಾದ ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಇದೇ ಪದ್ಧತಿಯನ್ನು ನಮ್ಮ ರಾಜ್ಯದಲ್ಲಿಯೂ ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಹೆಚ್.ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಸಧ್ಯಕ್ಕೆ ಇಂಥ ಯಾವ ಯೋಜನೆಯೂ ಇಲ್ಲ.

ಆ) ಇಲ್ಲ.

ಇ) ಹೌದು.

ಈ) ಬೇರೆ ಬೇರೆ ರಾಜ್ಯಗಳಿಂದ ಪೂರ್ಣ ವಿವರಗಳನ್ನು ತರಿಸಿ ಪರಿಶೀಲಿಸಲಾಗುವುದು.

ಹರಪನಹಳ್ಳಿಯಲ್ಲಿರುವ ಸಾರ್ವಜನಿಕ ಆಸ್ಪತ್ರೆ.

೧೧೧೧. ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಪನಹಳ್ಳಿ ಪಟ್ಟಣದಲ್ಲಿರುವ ಸಾರ್ವಜನಿಕ ಆಸ್ಪತ್ರೆಯು ಅಲ್ಲಿಯ ಸುಮಾರು ೩೦ ಸಾವಿರ ಜನಸಂಖ್ಯೆಗೆ ಕನಿಷ್ಟ ಅವಶ್ಯಕತೆಯನ್ನು ಪೂರೈಸಲು ಸಾಧ್ಯವಾಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಕಳೆದ ಅಧಿವೇಶನದಲ್ಲಿ ೫೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಏಳನೇ ಯೋಜನೆಯಲ್ಲಿ ಅಳವಡಿಸಿಕೊಂಡು ಸಾರ್ವಜನಿಕ ತೊಂದರೆಯನ್ನು ನಿವಾರಿಸುವುದಾಗಿ ಸರ್ಕಾರದವರು ಭರವಸೆ ನೀಡಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು ?

ಈ) ಸದರಿ ಆಸ್ಪತ್ರೆಯನ್ನು ೫೦ ಹಾಸಿಗೆಯುಳ್ಳ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮಾರ್ಪಡಿಸಲು ಎಷ್ಟು ಕಾಲಾವಕಾಶ ತೆಗೆದುಕೊಳ್ಳಲಾಗುವುದು ?

ಶ್ರೀ ಹೆಚ್.ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಬಂದಿದೆ.

ಆ) ೩೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವುದನ್ನು ಪರಿಶೀಲಿಸುವುದಾಗಿ ತಿಳಿಸಲಾಗಿತ್ತು.

ಇ) ಇದು ಪರಿಶೀಲನೆಯಲ್ಲಿದೆ.

ಈ) ಸದರಿ ಆಸ್ಪತ್ರೆಯನ್ನು ೩೦ ಹಾಸಿಗೆಗಳ ಜನರಲ್ ಆಸ್ಪತ್ರೆಯನ್ನಾಗಿ ಯೋಜನೆ ಯಂಡಿಯಲ್ಲಿ ಸಾಕಷ್ಟು ಹಣ ದೊರತು ಮುಂಬರುವ ವರ್ಷಗಳಲ್ಲಿ ಮೇಲ್ದರ್ಜೆ ಗೇರಿಸಲಾಗುವುದು. ೩೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮಾರ್ಪಡಿಸಲು ಸದ್ಯದ ನಿಯಮದ ಪ್ರಕಾರ ಸಾಧ್ಯವಿಲ್ಲ. ಇದು ಲಭ್ಯವಾಗುವ ಹಣದ ಮೇಲೆ ಅವಲಂಭಿಸಿದೆ.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ೨೫ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—೨೫ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಗಿದೆ.